ಎಲ್ಲರೂ ಹೋದ ಮೇಲೆ ತಿಜೋರಿಯನ್ನು ಕೊಳ್ಳೆಹೊಡೆಯಲಾಗಿದೆ ಎಂದು ಗೊತ್ತಾಯಿತು. ನಾನು ಅದನ್ನು ಸರಿಯಾಗಿ ಮುಚ್ಚುವಲ್ಲಿ ಎಡವಿದ್ದೆ ಅನಿಸುತ್ತದೆ. ಯಾರೋ ಅದನ್ನು ಕಳುವು ಮಾಡಿದ್ದಾರೆ. ಪೈರೆಟ್ ಅವರೆ, ಪದ್ಮರಾಗ ಮತ್ತು ಪಚ್ಚೆ ನೆಕ್ಲೇಸ್‌ಗಳು ನನ್ನ ಜೀವಮಾನದ ಸಂಗ್ರಹಗಳು! ಅವನ್ನು ಪಡೆಯಲು ನಾನೇನು ಮಾಡಲಿಲ್ಲ! ಪ್ರಚಾರ ಒಂದು ಬಿಟ್ಟು. ನಿಮಗೆ ಅರ್ಥವಾಗಿರಬೇಕಲ್ಲ, ಪೈರೆಟ್? ಬಂದವರು ನನ್ನದೇ ಅತಿಥಿಗಳು, ನನ್ನ ಆತ್ಮೀಯ ಗೆಳೆಯರು! ಇದೊಂದು ಭಯಂಕರ ಹಗರಣ ಅನಿಸಿಕೊಳ್ಳಬಹುದು!"

"ನೀವು ಸ್ಟುಡಿಯೊಗೆ ಹೋಗುವಾಗ ಈ ಕೋಣೆಯಿಂದ ಕೊನೆಗೆ ಹೊರಗೆ ಹೋದ ವ್ಯಕ್ತಿ ಯಾರು?"

"ಮಿಸ್ಟರ್ ಜಾನ್‌ಸ್ಟನ್. ನಿಮಗೆ ಅವನು ಗೊತ್ತಾ? ದಕ್ಷಿಣ ಆಫ್ರಿಕಾದ ಕೋಟ್ಯಧಿಪತಿ ಅವನು. ಪಾರ್ಕ್‌ಲೇನ್‌ನಲ್ಲಿರುವ ಅಬೋಟ್‌ಬರಿಸ್ ಮನೆಯನ್ನು ಬಾಡಿಗೆಗೆ ಪಡೆದುಕೊಂಡಿದ್ದಾನೆ. ಅವನೇ ಕೊನೆಗೆ ಇದ್ದದ್ದು. ನನಗೆ ಸರಿಯಾಗಿ ನೆನಪಿದೆ. ಆದರೆ ಖಂಡಿತವಾಗಿಯೂ... ಓಹೋ! ಖಂಡಿತವಾಗಿಯೂ ಅವನಲ್ಲ."

"ಮತ್ತೆ, ನಿಮ್ಮ ಗೆಳೆಯರು ಯಾರಾದರೂ ಪೂರ್ವಯೋಜಿತವಾಗಿ ಮಧ್ಯಾಹ್ನದ ಹೊತ್ತು ವಾಪಸ್ ಬಂದಿದ್ದರಾ?"

"ಪೈರೆಟ್ ಅವರೆ, ನನ್ನ ತಲೆಯಲ್ಲಿ ಇದೇ ಪ್ರಶ್ನೆ ಸುಳಿದಾಡುತ್ತಿತ್ತು. ಮೂವರು ಹಾಗೆ ಮಾಡಿದ್ದಾರೆ. ಕೌಂಟೆಸ್ (ಸರದಾರನ ಪತ್ನಿ) ವೇರ ರೊಸ್ಸಕಾಫ್, ಮಿಸ್ಟರ್ ಬರ್ನಾರ್ಡ್ ಪಾರ್ಕರ್ ಮತ್ತು ಲೇಡಿ ರನ್‌ಕಾರ್ನ್."

"ಅವರ ಬಗ್ಗೆ ಕೇಳಬಹುದೆ?"

"ಕೌಂಟೆಸ್ ವೇರ ರೊಸ್ಸಕಾಫ್ ರಷ್ಯಾದ ಸುಂದರ ಮಹಿಳೆ. ಅವಳು ಇತ್ತೀಚೆಗೆ ಈ ದೇಶಕ್ಕೆ ಬಂದವಳು. ಅವಳು ಆವಾಗಲೇ ಹಿಂತಿರುಗಿ ಹೋದವಳು ಮತ್ತೆ ಈ ಕೋಣೆಗೆ ಬಂದಾಗ ಆಶ್ಚರ್ಯವಾಯಿತು. ಅದಲ್ಲದೆ, ಅವಳು ತಿಜೋರಿಯನ್ನು ಇಣುಕುತ್ತಿದ್ದುದನ್ನು ಗಮನಿಸಿದ್ದೇನೆ. ಇದರಿಂದ ಆಕೆಯ ಮೇಲೆ ಸಂದೇಹ ಮೂಡುವುದಿಲ್ಲವೇ, ಪೈರೆಟ್ ಅವರೆ?"

"ಖಂಡಿತವಾಗಿಯೂ ಸಂದೇಹಿಸುವಂತದ್ದೆ... ಆದರೆ ಉಳಿದವರ ಬಗ್ಗೆಯೂ ಕೇಳೋಣ."

"ಸರಿ, ಪಾರ್ಕರ್ ಸುಮ್ಮನೆ ಇಲ್ಲಿಗೆ ಲೇಡಿ ರನ್‌ಕಾರ್ನ್ ಅವರ ಜೊತೆಗೆ ನನ್ನಲ್ಲಿದ್ದ ಸೂಕ್ಷ್ಮಾಕಾರದ ಹರಳುಗಳನ್ನು ನೋಡಲು ಬಂದವನು."

"ಮತ್ತೆ ಲೇಡಿ ರನ್‌ಕಾರ್ನ್?"

"ಲೇಡಿ ರನ್‌ಕಾರ್ನ್ ಮಧ್ಯವಯಸ್ಸಿನ, ತುಸು ಜೋರಿನ ಮಹಿಳೆ. ಹೆಚ್ಚಿನ ಸಮಯವನ್ನು ಸೇವಾಸಂಸ್ಥೆಗಳಲ್ಲಿ ಕಳೆಯುವವಳು. ಅವಳು ಹಿಂದಕ್ಕೆ ಬಂದದ್ದು ಎಲ್ಲೋ ಮರೆತುಹೋದ ಅವಳ ಕೈಚೀಲವನ್ನು ತೆಗೆದುಕೊಂಡು ಹೋಗಲು ಇರಬಹುದು."

"ಹಾಗಾದರೆ ನಾಲ್ಕೂ ಮಂದಿ ಸಂದೇಹಿತರು. ರಷ್ಯಾದ ಹೆಂಗಸು, ಇಂಗ್ಲಿಷ್‌ನವಳು, ದಕ್ಷಿಣ ಆಫ್ರಿಕಾದ ಕೋಟ್ಯಧಿಪತಿ ಮತ್ತು ಬರ್ನಾರ್ಡ್ ಪಾರ್ಕರ್. ಈ ಪಾರ್ಕರ್ ಯಾರು?"

"ಅವನು... ಅವನು ಒಬ್ಬ ಯುವಕ. ಹೌದು, ಅವನೊಬ್ಬ ತರುಣ."

"ನನಗೆ ಅನುಮಾನವಿತ್ತು. ಮಿಸ್ಟರ್ ಪಾರ್ಕರ್ ಏನು ಮಾಡುತ್ತಾನೆ?" ಪೈರೆಟ್ ಗಂಭೀರನಾಗಿ ಕೇಳಿದ.

"ಅವನು ಪಟ್ಟಣದ ಹುಡುಗ."

"ಅವನು ನಿಮ್ಮ ಗೆಳೆಯನಾದದ್ದು ಹೇಗೆಂತ ನಾನು ತಿಳಿದುಕೊಳ್ಳಬಹುದೆ?"